(ಗೊಂದಲ)

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಮೊನ್ನೆ ದಿವಸವೂ ಇದೇ ರೀತಿಯಲ್ಲಿ ಸಭೆಯ ಮುಂದೆ ಮಂಡಿಸಿದ್ದೇನೆಂದು ಹೇಳಿದರು. ಆದರೆ ಉತ್ತರಗಳನ್ನು ಯಾರ ಟೇಬಲ್ ಮೇಲೂ ಇಟ್ಟಿರಲಿಲ್ಲ, ಈಗಲೂ ಇಟ್ಟಿಲ್ಲ.

ಅಧ್ಯಕ್ಷರು : ನಿಮಗೆ ತೊಂದರೆಯಾಗುತ್ತದೆಂದು ಕೊಟ್ಟಿರಲಿಲ್ಲ, ಈಗ ಕೊಡುತ್ತಾರೆ.

4). ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ,

1. ಪಶ್ಚಿಮ ಘಟ್ಟವು ಹರಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಸ್ಯ ಸಂಪತ್ತು ಪ್ರಾಣಿ ಸಂಪತ್ತಿನ ಜೀವವೈವಿಧ್ಯವನ್ನು ಸಂರಕ್ಷಿಸುವ ಬಗ್ಗೆ ಕೆ.ಪ್ರಭಾಕರ ಬಂಗೇರ ಅವರು ಸಹಿ ಮಾಡಿರುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

2. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ನೀರಿನ ಸಮಸ್ಯೆಯಿಂದಾಗಿ ಜಲಮರು ಪೂರಣ ಯೋಜನೆಗಳಿಗೆ ಆದ್ಯತೆ ನೀಡುವ ಬಗ್ಗೆ ಕೆ.ಪ್ರಭಾಕರ ಬಂಗೇರ ಅವರು ಸಹಿ ಮಾಡಿರುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು : 69ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪಕಾಲಾವಧಿ ಚರ್ಚೆ.

ಅಧ್ಯಕ್ಷರ ಅನುಜ್ಞೆಯ ಮೇರೆಗೆ

ವಿಷಯ : ಶೂನ್ಯ ವೇಳೆಯ ಮಹತ್ವದ ಬಗ್ಗೆ ಪ್ರಸ್ತಾಪ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈಗ ಶೂನ್ಯ ವೇಳೆ...

ಅಧ್ಯಕ್ಷರು : ಈಗ ಶೂನ್ಯ ವೇಳೆಗೆ ಸಂಬಂಧಪಟ್ಟಂತೆ ಪ್ರಶ್ನೆಗಳು ಏನಿದೆ ಸದಸ್ಯರುಗಳು ಯಾರ್ಯಾರು ಕೊಟ್ಟಿದ್ದಿರೋ, ಒಂದಕ್ಕೂ ಉತ್ತರ ನಮಗೆ ಬಂದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ಪ್ರತಿ ದಿವಸವೂ ಬರುತ್ತಲೇ ಇದ್ದೇನಲ್ಲಾ...

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾವು ಕೊಡುವಂತಹ ವಿಷಯಗಳಿಗೆ ಯಾರು ಪರಿಹಾರವನ್ನು ಕೊಡಬೇಕು ಹೇಳಿ ? ನಾವು ಶೂನ್ಯ ವೇಳೆಯಲ್ಲಿ ಕೇಳುವಂತಹ ಅಗತ್ಯ ಏನಿದೆ ? ನಾವು ಕೇಳುವಂತಹ ಪ್ರಶ್ನೆಗೆ ತತ್-ತಕ್ಷಣವೇ ಉತ್ತರ ಕೊಡಬೇಕು. ಅದಕ್ಕೆ ಸರ್ಕಾರದವರು ತತ್-ತಕ್ಷಣವೇ ಗಮನ ಕೊಡಬೇಕೆಂದು ಪ್ರಶ್ನೆಯನ್ನು 5-6 ದಿವಸಗಳ ಹಿಂದೆಯೇ ಬರೆದು ಕೊಟ್ಟರೆ ಇವರು ಉತ್ತರವನ್ನು ಕೊಡಲಿಲ್ಲವೆಂದರೆ ಇದರ ಅರ್ಥವೇನು ? ಸರ್ಕಾರ ನಡೆಯುವುದಿಲ್ಲವೇ ? ನಾವು ಯಾವ ಕಾರಣಕ್ಕೋಸ್ಕರ ಬರೆದು ಕೊಡಬೇಕು ? ನಮಗೆ ಗೌರವವಿಲ್ಲವೆಂದರೆ, ನಾವು ಇಲ್ಲಿ ಕುಳಿತುಕೊಳ್ಳುವಂತಹ ಅವಶ್ಯಕತೆ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆ ಎಂದರೆ ಕೆಲವು ಮುಖ್ಯವಾದಂತಹ ವಿಷಯಗಳನ್ನು ಕೇಳುವಂಥಾದ್ದು ಇರುತ್ತದೆ. ಅದನ್ನು ಸರ್ಕಾರದ ಗಮನಕ್ಕೂ ತರುವುದು, ಲೆಟರ್ ಬರೆದು ಕೊಡುವುದು, ಇದು ಜರೂರು ಇದೆ ಎಂದು ಹೇಳುತ್ತೇವೆ. ನಾವು ಸರ್ಕಾರದ ಗಮನಕ್ಕೆ ತರುವಂತಹ ಸಂದರ್ಭದಲ್ಲಿ ಇವರು ಎರಡು ದಿವಸಗಳಾದರೂ, ಐದು ದಿವಸಗಳಾದರೂ ಉತ್ತರವನ್ನು ಕೊಡುವುದಿಲ್ಲವೆಂದರೆ ಏನು ಪ್ರಯೋಜವಿಲ್ಲ. ಮತ್ತೆ ಈ ಶೂನ್ಯ ವೇಳೆಗೆ ಮಹತ್ವವೇ ಉಳಿಯುವುದಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲೂ ನಾನು ನಿಮಗೆ ಹೇಳಿದ್ದೆ you have to define what is meant by "zero hour" ನಾನು ಸ್ಪೀಕರ್ ಆಗಿದ್ದಾಗಲೇ ಇದರ ಬದಲಾವಣೆ ಮಾಡಿದ್ದೆ, ಅದೇನೆಂದರೆ bringing to the notice of the House. You cannot elevate zero hour to the status of a question hour. ಅದು ಸದನದ ಗಮನ ಸೆಳೆಯುವುದು, ಸರ್ಕಾರದ ಗಮನವನ್ನಲ್ಲ. ನೀವು ಯಾವುದನ್ನು ಗಮನಕ್ಕೆ ತರುತ್ತಿರೋ ಅದನ್ನು ಆಮೇಲೆ ಸರ್ಕಾರ ಗಮನಿಸಿ ಸದಸ್ಯರಿಗೆ ಉತ್ತರವನ್ನು ಲಿಖಿತ ಮೂಲಕ ಕಳುಹಿಸುವಂಥಾದ್ದು ಇತ್ತು.

ಶ್ರೀ ಜಗದೀಶ್ ಶೆಟ್ಟರ್ : ತಾವು ಅದನ್ನೇ ಸದಸ್ಯರ ಗಮನಕ್ಕೆ ಕೊಡಬೇಕು.

ಅಧ್ಯಕ್ಷರು : ಅವರು ಕಳುಹಿಸಿರುವುದೆಲ್ಲಾ ರೂಲ್ 351ರ ಪ್ರಕಾರ ರೈಸ್ ಮಾಡತಕ್ಕಂಥವುಗಳು, Even then you have to give notice. ಶೂನ್ಯ ವೇಳೆಯಲ್ಲಿ ರೈಸ್ ಮಾಡಬೇಕಾದರೂ ಕೂಡ ನಮಗೆ 351ರ ಪ್ರಕಾರ ನಮಗೆ ಕೊಡಬೇಕು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ರೂಲ್ 351 ಅಲ್ಲ, ಶೂನ್ಯ ವೇಳೆಯಲ್ಲಿ ನಮ್ಮ ಲೆಟರ್ ಹೆಡ್‌ನ್ನು ನಿಮಗೆ ನಾವು ಬರೆದುಕೊಟ್ಟಿದ್ದಕ್ಕೆ ಹಿಂದಿನ ಬಾರಿಯ ಒಂದು ರೂಲಿಂಗ್ ಕೂಡ ಇದೆ. ಸದನದಲ್ಲಿ ಸಂಬಂಧಿಸಿದ ಮಂತ್ರಿ ಇಲ್ಲದಿದ್ದರೂ ಪರವಾಗಿಲ್ಲ, ಸರ್ಕಾರದ ಯಾರಾದರೂ ಒಬ್ಬ ಮಂತ್ರಿ ಇದ್ದು ಅದಕ್ಕೆ ಸಂಬಂಧಿಸಿದ ಉತ್ತರ ಹೇಳಬೇಕೆನ್ನುವ ರೂಲಿಂಗ್ ಅನ್ನು ಕಳೆದ ಬಾರಿ ನಾನು ಇಲ್ಲಿ ಕುಳಿತಿದ್ದಾಗ ಕೊಡಲಾಗಿದೆ ದಯವಿಟ್ಟು ನಮಗೆ ಉತ್ತರವನ್ನು ಕೊಡಿಸಬೇಕು.

ಅಧ್ಯಕ್ಷರು : ತಮಗೆ ಸಮರ್ಪಕವಾದ ಉತ್ತರಬೇಕಾದಲ್ಲಿ ಸಂಬಂಧಿಸಿದ ಮಂತ್ರಿಗಳು ಹಾಜರಿರಬೇಕು.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ನಾವು ಕಳೆದ ಸಾರಿ ಈ ಸದನದಲ್ಲಿದ್ದಾಗ, ಯಾವುದಾದರೂ ತುರ್ತು ವಿಚಾರಗಳನ್ನು ಶೂನ್ಯ ವೇಳೆಯಲ್ಲಿ ಸದನದ ಗಮನಕ್ಕೆ ತರಬೇಕಾದರೆ ನಾವು ಅಧ್ಯಕ್ಷರನ್ನು ಹೋಗಿ ಭೇಟಿ ಮಾಡಿದರೆ ಅವರು ನಮಗೆ ಅಪ್ಪಣೆ ಕೊಡಿಸುತ್ತಿದ್ದರು. ಯಾರಾದರು ಮಂತ್ರಿಗಳು ಸದನದಲ್ಲಿ ಉಪಸ್ಥಿತರಿದ್ದರೆ ಅದಕ್ಕೆ ಉತ್ತರ ಕೊಡುವ ಪ್ರಯತ್ನ ಮಾಡುತ್ತಿದ್ದರು, ಇಲ್ಲದಿದ್ದರೆ ಮರುದಿವಸ ಉತ್ತರ ಕೊಡಿಸುವ ಪ್ರಯತ್ನವಾಗುತ್ತಿತ್ತು. ಕೆಲವು ಸಾರಿ ಸಂಬಂಧಿಸಿದ ಮಂತ್ರಿ ಇಲ್ಲದಿದ್ದರೂ ಕೂಡ ಸಂಸದೀಯ ವ್ಯವಹಾರ ಮಂತ್ರಿಗಳು ಸಂಬಂಧಿಸಿದ ಮಂತ್ರಿಗಳ ಗಮನಕ್ಕೆ ಆ ವಿಷಯವನ್ನು ತಂದು ನಮಗೆ ಉತ್ತರ ಕೊಡಿಸುವ ಕೆಲಸವಾಗುತ್ತಿತ್ತು. ಆದುದರಿಂದ ಇವತ್ತು ಸದನದಲ್ಲಿ ಅಂತಹ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆನ್ನುವುದು ನಮ್ಮ ಅಪೇಕ್ಷೆ, ಆದು

ಪರೋಕ್ಷವಾಗಿ ನಮಗೆ ಕೊಡುವ ರಕ್ಷಣೆಯಾಗಿದೆ.

ಶ್ರೀ ಡಿ.ಬಿ.ಚಂದ್ರೇಗೌಡ : ಇಲ್ಲಿ ಬೇರೆ ಬೇರೆ ವಿಧವಾದ ನಿಯಮಗಳನ್ನು ಇಟ್ಟುಕೊಂಡಿದ್ದೇವೆ. ಕಾಲಿಂಗ್ ಅಟೆನೆಷನ್ ನೋಟೀಸ್ ಕಳುಹಿಸುತ್ತೇವೆ, ಶಾರ್ಟ್ ನೋಟಿಸ್ ಕ್ವೆಶ್ಚನ್ ಕಳುಹಿಸುತ್ತೇವೆ, ಕ್ವೆಶ್ಚನ್ ಅನ್ನು ಕಳುಹಿಸುತ್ತೇವೆ. ಮಾನ್ಯ ಅಧ್ಯಕ್ಷರೆ ಪುನಃ ಪುನಃ ಅದಕ್ಕಾಗಿಯೆ ತಾವು ನಿರ್ದಿಷ್ಟಪಡಿಸಿ ಎಂದು ಹೇಳಿದ್ದು, As per Rule 351 "A member who wishes to bring to the notice of the House any matter which is not a point of order shall give notice to the Secretary in writing stating briefly the point which he wishes to raise in the House together with reasons for wishing to rasie it and he shall be permitted to raise it only after the Speaker has given as consent and such time and date as the Speaker may fix " ಉತ್ತರ ಕೊಡಬೇಕೆಂದು ಎಲ್ಲಿದೆ ಸ್ವಾಮಿ ?

Sri D.V.Sadananda Gowda : I do concede so fr as Ruling is concerned, certainly there is no dispute. ಈಗಲೂ ನಾವು ಅಧ್ಯಕ್ಷರು ಅನುಮತಿ ಕೊಟ್ಟರೆ ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆ ಎಂದು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಉತ್ತರವನ್ನು ಮುಚ್ಚಿಡಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ಉತ್ತರವನ್ನು ಒದಗಿಸಬೇಕೆಂದರೆ, ಆಗ ಸರ್ಕಾರಕ್ಕೆ ಸಮಯ ಸಿಗುತ್ತದೆ, ಉತ್ತರ ತರಿಸಿಕೊಡಬಹುದು, ಈ ತಕ್ಷಣವೇ ತರಿಸಿಕೊಡಿ ಎಂದರೆ ಹೇಗೆ ?

ಶ್ರೀ ಡಿ.ವಿ.ಸದಾನಂದಗೌಡ : ನಾವು, ನಮಗೆ ಸದನದ ಗಮನಕ್ಕೆ ವಿಚಾರಗಳನ್ನು ತರುವುದಕ್ಕೆ ಅವಕಾಶಕೊಡಿ ಎಂದು ಹೇಳುತ್ತಿರುವುದು. ಕಳೆದ ಸದನದಲ್ಲಿ ಏನಾಗುತ್ತಿತ್ತೆಂದರೆ ನಾವು ಪ್ರಸ್ತಾಪ ಮಾಡುವುದು ಆ ಕಡೆಯಿಂದ ಉತ್ತರ ಕೊಡುವ ಕೆಲಸವಾಗುತ್ತಿತ್ತು, ಚರ್ಚೆಗೆ ಅವಕಾಶ ಕೊಡುತ್ತಿರಲಿಲ್ಲ.

ಅಧ್ಯಕ್ಷರು : ಸಂಬಂಧಿಸಿದ ಮಂತ್ರಿಗಳು ಇಲ್ಲದಿದ್ದರೆ ಉತ್ತರ ಹೇಗೆ ಕೊಡಿಸುವುದಕ್ಕಾಗುತ್ತದೆ ?

ಶ್ರೀ ಡಿ.ವಿ. ಸದಾನಂದಗೌಡ : ನಾಳೆಯಾದರೂ ಅದಕ್ಕೆ ಉತ್ತರ ಕೊಡುವ ಪ್ರಯತ್ನವಾಗ ಬೇಕಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ, ಇಲ್ಲಿ ನಾವು ಪ್ರಸ್ತಾಪಿಸುತ್ತಿದ್ದೆವು. ಸಂಬಂಧಿಸಿದ ಮಂತ್ರಿಗಳು ಇಲ್ಲದಿದ್ದರೆ, ಮೊದಲಿನದಿವಸ ನಾವು ಸಂಸದೀಯ ವ್ಯವಹಾರ ಮಂತ್ರಿಗಳಿಗೆ ಬರೆದು ಕಳುಹಿಸಿದರೆ ಅವರಿಗೆ ಉತ್ತರ ಕೊಡುತ್ತಿದ್ದರು, ಸಂಸದೀಯ ವ್ಯವಹಾರ ಸಚಿವರು ನಮಗೆ ಉತ್ತರ ಕೊಡುತ್ತಿದ್ದರು. ಕ್ಲಾರಿಫಿಕೇಷನ್ ಇದ್ದರೆ ನಾನು ತಿಳಿಸಿ ಹೇಳುತ್ತೇನೆಂದು ಸರ್ಕಾರದ ಗಮನಕ್ಕೆತರುತ್ತಿದ್ದರು, ಇದು ನಮಗಿರುವ ಒಂದು ಅವಕಾಶವಾಗಿದೆ. ಕನಿಷ್ಟ ಇಲ್ಲಿ ನಾವು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ನಾವು ಬರೆದುಕೊಟ್ಟು ಎರಡು ಮೂರು ದಿವಸಗಳಾಗಿವೆ ಕನಿಷ್ಟ ಉತ್ತರ ಸಂಸದೀಯ ವ್ಯವಹಾರಗ ಸಚಿವರ ಹತ್ತಿರವಾದರು ಅದರ ಉತ್ತರ ಇರಬೇಕಲ್ಲವೇ ? ನಾವು ಬರೆದುಕೊಟ್ಟು ಕೂಡ ಏನು ಪ್ರಯೋಜನ ಹೇಳಿ ?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ತಮ್ಮ ಭಾವನೆಗೆ ನಮಗೆ ಗೌರವವುಂಟು. ತಮ್ಮ ಭಾವನೆ ಏನೆಂದರೆ ಯಾವುದೇ ಒಬ್ಬ ಸದಸ್ಯರು ಪ್ರಶ್ನೆ ಕೇಳಿದಾಗ ಅದಕ್ಕೆ ಪರಿಪೂರ್ಣವಾದ ಉತ್ತರ ಲಭ್ಯವಾದರೆ ಮಾತ್ರ ಸಂಪೂರ್ಣ ಉತ್ತರವಾಗುತ್ತದೆ ಎಂಬುದಾಗಿದೆ, ನಾವು ಖಂಡಿತವಾಗಿಯು ಅದನ್ನು ಗೌರವಿಸುತ್ತೇವೆ. ಆ ಭಾವನೆಯನ್ನು ಯಾರು ಉಳಿಸಿಕೊಳ್ಳಬೇಕೋ ಅವರು ಅದನ್ನು ಮಾಡಲಿಲ್ಲವೆಂದರೆ ನಾವೇನು ಮಾಡುವುದಕ್ಕಾಗುತ್ತದೆ? ತಾವು ಇಷ್ಟು ಸೌಜನ್ಯದಿಂದ ನಮ್ಮ ರಕ್ಷಣೆಗೆ ಬರುತ್ತಿದ್ದೀರಿ, ನಮಗೆ ಪೂರ್ತಿ ಉತ್ತರ ಬರಲಿ ಅದು ಬಂದ ಮೇಲೆ ಉತ್ತರ ಕೊಡಿಸೋಣವೆನ್ನುವ ಭಾರಿ ದೊಡ್ಡ ಮನಸ್ಸು ತಮ್ಮಲ್ಲಿದೆ ಆದರೆ ಇಲ್ಲಿ ಸಣ್ಣದು ಕೂಡ ಆ ಕಡೆಯವರಿಗೆ ಇಲ್ಲದಿದ್ದರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಸಭಾಧ್ಯಕ್ಷರು ಯಾವ ಪಕ್ಷಕ್ಕೂ ಸೇರಿದವರಲ್ಲ, ಆ ಸ್ಥಾನದಲ್ಲಿ ಕುಳಿತುಕೊಂಡು ಧರ್ಮದ ತಕ್ಕಡಿಯನ್ನು ಸರಿಯಾಗಿ ಹಿಡಿಯಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ : ಪ್ರತಿಯೊಂದಕ್ಕೂ ನಾವು ಕೇಳುವುದು ಸರ್ಕಾರ ತಿಳಿದಂಥ ಅಥವಾ ತಿಳಿದೊ ಏನೋ ಒಂದು ಉತ್ತರವನ್ನು ಕೊಡುವುದು, ಉತ್ತರ ಸಮರ್ಪಕವಾಗಿರುತ್ತದೊ ಇಲ್ಲವೊ any Government for that matter requires sometime to digest the question and reply. ಸುಮ್ಮನೆ ಏನೋ ಉತ್ತರ ಬೇಕೆನ್ನುವುದಾದರೆ ಹೇಳಿಸೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡುವುದಕ್ಕೆ ಸದಸ್ಯರಾಗಿರುವ ನಾವು ತಮ್ಮ ಕೊಠಡಿಗೆ ಬಂದು ಸದನ ಪ್ರಾರಂಭವಾಗುವುದಕ್ಕೆ ಮುಂಚೆ ಹೇಳುತ್ತೇವೆ. ತದನಂತರ ತಕ್ಷಣ ಸಂಬಂಧಿಸಿದ ಮಂತ್ರಿಗಳಿಗೆ ಕಳುಹಿಸಿಕೊಡುವುದು ತಮ್ಮ ಕಛೇರಿಯಿಂದಾಗುತ್ತದೆ. ಆದರೆ ಇಂತಹದೇ ಉತ್ತರ ಸರ್ಕಾರದಿಂದ ಕೊಡಬೇಕೆಂದು ನಿರೀಕ್ಷೆ ಮಾಡುವುದು ತಪ್ಪಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಸರ್ಕಾರವು ಕೂಡ ವಿಷಯಗಳನ್ನು ದೂರದಿಂದ ತರಿಸಿಕೊಳ್ಳಬೇಕು ಎಂದಾಗ ಅನೇಕ ತೊಂದರೆಗಳಿರುತ್ತವೆ. ನನ್ನ ಅಭಿಪ್ರಾಯವೇನೆಂದರೆ, ಯಾರೇ ವಿರೋಧಪಕ್ಷದ ಸದಸ್ಯರು ತಮ್ಮಲ್ಲಿ ಬಂದು ಹೇಳಿದಾಗ, ಮಂತ್ರಿಗಳು ಉತ್ತರ ಕೊಡಲು ತಯಾರಾಗಲು ಎರಡು ದಿವಸ ತೆಗೆದುಕೊಳ್ಳುವುದರಿಂದ ಉಪಯೋಗವಾಗುವುದಿಲ್ಲ, ಕೆಲವು ವಿಚಾರಗಳಲ್ಲಿ ಅವತ್ತೇ ಸಂಬಂಧಿಸಿದ ಮಂತ್ರಿಗಳು, ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ದಯಮಾಡಿ ನಮಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ ಉದಾಹರಣೆಗೆ ಈಗ ಪಾರ್ಲಿಮೆಂಟ್‌ನಿಂದ ಒಂದು ಪುಸ್ತಕವನ್ನು ಪ್ರಕಟಣೆ ಮಾಡಿದ್ದಾರೆ, ಆ ಪುಸ್ತಕ ನಮಗೆ ಸಿಗುತ್ತಿಲ್ಲ. "ಶೂನ್ಯವೇಳೆ" ಏನೆಂಬುದನ್ನು ತಿಳಿದುಕೊಳ್ಳಬೇಕು. ಈಗ ಇರುವ ಅಧ್ಯಕ್ಷರು ಏಳುಜನ ಸದಸ್ಯರಿಗೆ ಒಂದೊಂದು, ಎರಡೆರಡು ನಿಮಿಷಗಳಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಶೂನ್ಯ ವೇಳೆಯಲ್ಲಿ ಪ್ರತಿದಿವಸ ಅವಕಾಶ ಮಾಡಿಕೊಡುತ್ತಾರೆ. ಆ ಅವಧಿಯಲ್ಲಿ ನಾವು ಹೇಳುತ್ತೇವೆ, ಅನೇಕ ಸಂದರ್ಭಗಳಲ್ಲಿ ಸರ್ಕಾರವು ಕೂಡ ತಕ್ಷಣವೇ ಉತ್ತರ ಕೊಡದಿದ್ದರೆ ಎಂಬರಾಸ್‌ಮೆಂಟ್ ಇರುತ್ತದೆ, ಆದುದರಿಂದ ಸರ್ಕಾರದಲ್ಲಿರುವವರು ಯಾರಾದರೂ ಕೂಡ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅವರು ಉತ್ತರ ಕೊಡದಿದ್ದರೆ ಅವರ ಗೌರವಕ್ಕೆ ಧಕ್ಕೆ ಬರುತ್ತದೆ ಹೊರತು ನಮಗೇನು ತೊಂದರೆಯಾಗುವುದಿಲ್ಲ ಆದರೆ ನಮ್ಮ ಹಕ್ಕನ್ನು ಈ ಮೂಲಕ ಕಾಪಾಡಿದರೆ, ಸದನ ಸಲೀಸಾಗಿ ನಡೆಯುವುದಕ್ಕೆ, ಅನೇಕ ವಿಚಾರಗಳು ಹೊರಬರುವುದಕ್ಕೆ ಬಹಳ ಅನುಕೂಲವಾಗುತ್ತದೆ ಎನ್ನುವುದು ನನ್ನ ನಿವೇದನೆಯಾಗಿದೆ.

ಅಧ್ಯಕ್ಷರು : ಮಾನ್ಯ ಸಂಸದೀಯ ವ್ಯವಹಾರ ಸಚಿವರೆ, ಮುಂದಿನ ನಮ್ಮ ಜಿಎಸಿ ಸಭೆಯಲ್ಲಿ ಈ ವಿಷಯವನ್ನು ಇಟ್ಟು ಯಾವ ರೀತಿ ಮಾಡಬೇಕೆನ್ನುವುದನ್ನು ತೀರ್ಮಾನ ಮಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಗಬಹುದು ಅಧ್ಯಕ್ಷರೆ.

ಶ್ರೀ ಬಿ.ಆರ್. ಯಾವಗಲ್ : ಅಧ್ಯಕ್ಷರೆ, ನನಗೆ ಗೊತ್ತಿರುವಂತೆ ಒಂದು ಸಣ್ಣ ಸಲಹೆ, ಈ ಶೂನ್ಯವೇಳೆ 351 ಬಹುತೇಕ ಮೊದಲಿನ ಸಂಪ್ರದಾಯದಂತೆ ಕೊಡಿಪೈಯಾಗಿ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಸಚಿವರು ಅಧ್ಯಕ್ಷರಾಗಿದ್ದಾಗಲೆ ಬಂದಿದ್ದು. ಈ ವ್ಯವಸ್ಥೆ ಬಂದದ್ದೇ ಆಗ. ನಾವೆಲ್ಲಾ ನಿಯಮ 351ರ ಅಡಿಯಲ್ಲಿ ಪ್ರಸ್ತಾಪವಾದ ವಿಷಯಗಳಿಗೆ ಮಂತ್ರಿಗಳಾಗಿ ಹೇಳಿಕೆಯನ್ನು ಕೊಡುತ್ತಿದ್ದೆವು. ನಂತರ ಕಳೆದ ಹಾಗೂ ಅದಕ್ಕಿಂತ ಹಿಂದೆ ವಿಧಾನಸಭೆಯಲ್ಲಿ ನಿಯಮ 351 ಉಳಿಯಿತು ಹಾಗೂ ಶೂನ್ಯವೇಳೆಯು ಆರಂಭವಾಯಿತು. ಶೂನ್ಯವೇಳೆಯಲ್ಲಿಯೇ ಒಂದು ವಿಷಯವನ್ನು ಒಂದು ದಿವಸವೆಲ್ಲ ತೆಗೆದುಕೊಂಡು ಚರ್ಚೆ ಮಾಡಿದಂತಹ ಉದಾಹರಣೆ ಇದೆ. ಇದರ ಉದ್ದೇಶ ಸರ್ಕಾರದಿಂದ ತುರ್ತಾಗಿ ಮಾಹಿತಿಯನ್ನು ಪಡೆದುಕೊಳ್ಳುವ ಅನುಕೂಲ ಇದರಲ್ಲಿದೆ ಎನ್ನುವುದು, ಸರ್ಕಾರ ಇದಕ್ಕೆ ಉತ್ತರ ಕೊಟ್ಟರೆ ಯಾವ್ದೆ ಪ್ರಮಾದವೇನೂ ಆಗುವುದಿಲ್ಲ.

ಅಧ್ಯಕ್ಷರು : ಈ ಬಗ್ಗೆ ಮುಂದಿನ ಜಿಎಸಿ ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಳ್ಳೋಣ. ಮಾನ್ಯ ಚಂದ್ರೇಗೌಡರವರು ಇವತ್ತು ಪ್ರಸ್ತಾಪ ಮಾಡುತ್ತಾರಂತೆ, ಮಂತ್ರಿಗಳ್ಯಾರಾದರು ಇದ್ದರೆ ಇವತ್ತೆ ಉತ್ತರ ಕೊಡಲಿ ಇಲ್ಲದಿದ್ದರೆ ಇನ್ನೊಂದು ದಿವಸ ಕೊಡಲಿ.

Sri D.B.Chandra Gowda : I have not come in the way of mentioning it. It should be free. ಪ್ರಸ್ತಾಪ ಮಾಡುವುದಕ್ಕೆ ನಾನು ವಿರೋಧ ಮಾಡಲೇ ಇಲ್ಲ, ಉತ್ತರವನ್ನು ಸರ್ಕಾರದಿಂದ ಕ್ಷಣ ನಿರೀಕ್ಷೆ ಮಾಡುವುದು ಸರಿಯಲ್ಲ.

ಅಧ್ಯಕ್ಷರು : ಪ್ರಸ್ತಾಪವನ್ನು ಸಂಕ್ಷಿಪ್ತವಾಗಿ ಮಾಡಬೇಕು. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತಿದ್ದೇನೆ ಪ್ರಸ್ತಾಪ ಮಾಡಿ, ಮೊದಲು ಅನುಕ್ರಮವಾಗಿ ಶ್ರೀ ಆತ್ಮನಂದಾ, ಶ್ರೀ ಪಿ.ರಮೇಶ್ ಹಾಗೂ ಶ್ರೀ ಎಂ.ಭಕ್ತವತ್ಸಲಂ, ಶ್ರೀ ಸಿ.ಬೈರೇಗೌಡ, ಶ್ರೀ ಕೆ.ಶ್ರೀನಿವಾಸಗೌಡರು ಇವರು ಉಪಸ್ಥಿತರಿಲ್ಲ, ಶ್ರೀ ಯಾವಗಲ್‌ರವರೆ ನೀವು ಪ್ರಸ್ತಾಪ ಮಾಡಿ.

4.00 ಪಿ.ಎಂ.

(ಆ) ನರಗುಂದ ತಾಲ್ಲೂಕಿನ ಕಣಕಿ ಕುಪ್ಪ ಗ್ರಾಮದ ಶಿವಪ್ಪ ಕೊಳ್ಳಿ ಎಂಬುವರ ಮಗಳು ಕಾಣೆಯಾಗಿರುವುದು.

ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೇ, ದಿನಾಂಕ 12-3-2000ರಂದು ನರಗುಂದ ತಾಲ್ಲೂಕಿನ ಕಣಕಿ ಕುಪ್ಪ ಗ್ರಾಮದ ಸುಮಾರು 15-16 ವರ್ಷ ವಯಸ್ಸಿನ ಬಾಲಕಿಯಾದ ದಾಕ್ಷಾಯಣಿ ಶಿವಪ್ಪ ಕೊಳ್ಳಿ ಎನ್ನುವ ಹೆಣ್ಣು ಮಗಳು ಕೆಲಸಕ್ಕೆ ಹೋಗಿದ್ದು ಸಂಜೆ ಸುಮಾರಿಗೆ ಅಲ್ಲಿಂದ ಕಾಣೆಯಾಗಿದ್ದಾಳೆ. ಇಲ್ಲಿಯವರೆಗೆ ಅವಳು ಎಲ್ಲಿದ್ದಾಳೆ. ಏನಾಗಿದ್ದಾಳೆ ಎನ್ನುವ ಪತ್ತೆ ಇಲ್ಲ. ಇದರ ಬಗ್ಗೆ ಪೋಲೀಸ್ ಇಲಾಖೆ ಪ್ರಯತ್ನ ಮಾಡಿದೆ ಎಂದು ನಾನು ಹೇಳುತ್ತೇನೆ. ಆದರೆ ಇಲ್ಲಿಯವರಿಗೆ ಅವಳು